# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 985 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 24/02/2023 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡಲಾಗುತ್ತಿರುವ ಪಿಂಚಣಿ ಸೌಲಭ್ಯ ಪಡೆಯಲು ನೊಂದಾಯಿತ ಕಾರ್ಮಿಕರು ಮಂಡಳಿಯಲ್ಲಿ ಕನಿಷ್ಠ ಮೂರು ವರ್ಷಗಳ ಸದಸ್ಯತ್ವದೊಂದಿಗೆ 60 ವರ್ಷ ಪೂರ್ಣಗೊಂಡ 6 ತಿಂಗಳೊಳಗೆ ಪಿಂಚಣಿ ಕೋರಿ ನಿಗದಿತ ದಾಖಲಾತಿಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಿರುವುದರಿಂದ ವಯೋಮಾನ ಮೀರಿರುವ ಹಲವಾರು ಅರ್ಹ ಕಾರ್ಮಿಕರು ಸದರಿ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾಗಿರುವ ಕಾರ್ಮಿಕರು ಮಂಡಳಿಯಲ್ಲಿ ಕನಿಷ್ಠ 3 ವರ್ಷಗಳ ಸದಸ್ಯತ್ವದೊಂದಿಗೆ 60 ವರ್ಷ ಪೂರ್ಣಗೊಂಡ 6 ತಿಂಗಳೊಳಗೆ ಪಿಂಚಣಿ ಕೋರಿ ನಿಗದಿತ ದಾಖಲೆಗಳೊಂದಿಗೆ ಸೇವಾ ಸಿಂಧು ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಿರುವುದು ಸರಿಯಷ್ಟೆ. ಮಂಡಳಿಯಿಂದ **5514** ಕಟ್ಟಡ ಕಾರ್ಮಿರು ಪಿಂಚಣಿ ಸೌಲಭ್ಯದಡಿ ಪ್ರತಿ ಮಾಹೆ ರೂ.3000 ರಂತೆ ಧನಸಹಾಯವನ್ನು ಪಡೆಯುತ್ತಿದ್ದಾರೆ.<br><br>ಮಂಡಳಿಯ 39 ನೇ ಸಭೆಯಲ್ಲಿ ಪಿಂಚಣಿ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಪ್ರಸ್ತುತ ಇರುವ 6 ತಿಂಗಳ ಅವಧಿಯನ್ನು ಗರಿಷ್ಠ 1 ವರ್ಷದ ವರೆಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ. |
| ಆ) | ಬಂದಿದ್ದಲ್ಲಿ, ಮಾಹಿತಿ ಹಾಗೂ ಅರಿವಿನ ಕೊರತೆಯ ಕಾರಣಗಳಿಂದಾಗಿ, ರಾಜ್ಯಾದ್ಯಂತ ಹಲವಾರು ಮಂದಿ 60 ವರ್ಷ ಪೂರ್ಣಗೊಂಡ 6 ತಿಂಗಳೊಳಗೆ ಪಿಂಚಣಿ ಕೋರಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಾಧ್ಯವಾಗಿರದ ಹಲವಾರು ಪ್ರಕರಣಗಳಿದ್ದು, ಸದರಿ ಪ್ರಕರಣಗಳಲ್ಲಿ ಆ ಕಾರ್ಮಿಕರಿಗೆ ನ್ಯಾಯ ಒದಗಿಸಲು ಸರ್ಕಾರ ಇದುವರೆಗೆ ಏನೇನು ಕ್ರಮಕೈಗೊಂಡಿದೆ? | ಮಂಡಳಿಯ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಲು ಈ ಕೆಳಕಂಡಂತಹ ಮಾಹಿತಿ ಶಿಕ್ಷಣ ಸಂವಹನ (ಐಇಸಿ) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ: ಪೋಸ್ಟರ್ಸ್, ಬ್ರೋಚರ್ಸ್, ಬ್ಯಾನರ್, ಹೋರ್ಡಿಂಗ್ಸ್, ಕಿರುಹೊತ್ತಿಗೆ, ಕ್ಯಾಲೆಂಡರ್ ಮತ್ತು ಲೀಫ್ಲೆಟ್ಸ್/ಪಾಂಪ್ಲೆಟ್ಸ್ ಮುಂತಾದ ಮುದ್ರಣ ಚಟುವಟಿಕೆಗಳು, ಶ್ರಾವ್ಯ ಮಾಧ್ಯಮದ ಮೂಲಕ ಪ್ರಚಾರ, ಆಟೋ ಬ್ರ್ಯಾಂಡಿಂಗ್, ಕಿರುಚಿತ್ರ/ಸಾಕ್ಷ್ಯಚಿತ್ರಗಳು, ವಾಹನ ಬ್ರ್ಯಾಂಡಿಂಗ್ ಚಟುವಟಿಕೆಗಳು, ರೇಡಿಯೋ ಪ್ರಚಾರ, ಎಲ್.ಇ.ಡಿ ಹೋರ್ಡಿಂಗ್, ಆಟೋಮೇಟೆಡ್‌ಕಾಲ್ಸ್, ಆಟೋಮೇಟೆಡ್ ಮೆಸೇಜಸ್ (ವಾಟ್ಸಾಪ್/ಟೆಕ್ಸ್ಟ್), ಟಿನ್‌ಪ್ಲೇಟ್ಸ್/ಸನ್ ಬೋರ್ಡ್/ಬಿಲ್ ಬೋರ್ಡ್ ಮುಂತಾದ ಬೋರ್ಡ್‌ಗಳ ಮುದ್ರಣ, ಬಸ್ ಬ್ರ್ಯಾಂಡಿಂಗ್ ಚಟುವಟಿಕೆ, ಬಸ್ ನಿಲ್ದಾಣ, ರೈಲು ನಿಲ್ದಾಣ |

| | | |
|---|---|---|
| | | ಮುಂತಾದ ಕಡೆಗಳಲ್ಲಿ ಶ್ರಾವ್ಯ ಮಾಧ್ಯಮಗಳ ಮೂಲಕ ಪ್ರಚಾರ, ರೈಲು ಬ್ರ್ಯಾಂಡಿಂಗ್, ರೈಲು ನಿಲ್ದಾಣಗಳಲ್ಲಿ ವೀಡಿಯೋ/ಆಡಿಯೋ ಪ್ರಚಾರ, ಬಸ್ ನಿಲ್ದಾಣ ಬ್ರ್ಯಾಂಡಿಂಗ್ ಮೂಲಕ ಪ್ರಚಾರ, ಎಲ್.ಇ.ಡಿ ವಾಹನ ಬ್ರ್ಯಾಂಡಿಂಗ್ ಚಟುವಟಿಕೆ, ಕಿಯೋಸ್ಕ್‌ನಂತಹ ವಿದ್ಯುನ್ಮಾನ ಇಂಟರಾಕ್ಟೀವ್ ಯಂತ್ರಗಳ ಮೂಲಕ ಪ್ರಚಾರ ಹಾಗೂ ಮಾಹಿತಿ ಬಿತ್ತರಿಕೆ, ಬಸ್ ನಿಲ್ದಾಣ/ರೈಲು ನಿಲ್ದಾಣ ಮುಂತಾದ ಕಡೆಗಳಲ್ಲಿ ಎಲ್.ಇ.ಡಿ ಡಿಸ್ಪ್ಲೇಗಳ ಮೂಲಕ ಪ್ರಚಾರ, ಗೋಡೆ ಬರಹ, ಸಾಮಾಜಿಕ ಮಾಧ್ಯಮ ಚಟುವಟಿಕೆಗಳು, ಟಿ.ವಿ ಜಾಹೀರಾತು, ದಿನ ಪತ್ರಿಕೆಗಳು, ವಾರ ಪತ್ರಿಕೆಗಳು, ಮಾಸಿಕ ಪತ್ರಿಕೆಗಳು, ವಿಶೇಷ ಸಂಚಿಕೆಗಳು ಮುಂತಾದವುಗಳಲ್ಲಿ ಪ್ರಕಟಣೆ, ಜಾಹೀರಾತು ಮೂಲಕ ಪ್ರಚಾರ, ವೀಡಿಯೋ ಡಿಸ್‌ಪ್ಲೇಗಳ ಅಳವಡಿಕೆ ಮತ್ತು ಜಾಹೀರಾತು, ಹೋರ್ಡಿಂಗ್ ಪ್ಯಾನೆಲ್‌ಗಳ ಅಳವಡಿಕೆ ಮತ್ತು ಜಾಹೀರಾತು, ಬೀದಿ ನಾಟಕ ಮತ್ತು ಆಟೋ ಮುಂತಾದ ವಾಹನಗಳ ಮೂಲಕ ಪ್ರಚಾರ. ಮಾಡಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಅರ್ಹ ಫಲಾನುಭವಿಗಳು 60 ವರ್ಷ ಪೂರ್ಣಗೊಂಡ 6 ತಿಂಗಳೊಳಗೆ ಪಿಂಚಣಿ ಕೋರಿ ಅರ್ಜಿ ಸಲ್ಲಿಸಲು ತಿಳಿಯದೇ ನಂತರದ ದಿನಗಳಲ್ಲಿ ಅರ್ಜಿ ಸಲ್ಲಿಸಿರುವ/ಸಲ್ಲಿಸುವ ಅರ್ಹ ನೊಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ ದೊರೆಯಲು ಕೂಡಲೇ ಈಗಿರುವ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಲು ಸರ್ಕಾರ ಈ ಕೂಡಲೇ ಕ್ರಮ ವಹಿಸುವುದೇ? | ದಿನಾಂಕ 15-02-2023 ರಂದು ನಡೆದ ಮಂಡಳಿಯ 39 ನೇ ಸಭೆಯಲ್ಲಿ ಪಿಂಚಣಿ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಪ್ರಸ್ತುತ ಇರುವ 6 ತಿಂಗಳ ಅವಧಿಯನ್ನು ಗರಿಷ್ಠ 1 ವರ್ಷದ ವರೆಗೆ ಹೆಚ್ಚಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ನಿಯಮಗಳಿಗೆ ತಿದ್ದುಪಡಿ ತರಲು ಕ್ರಮವಹಿಸಲಾಗುವುದು. |

**ಕಾಇ 124 ಎಲ್‌ಇಟಿ 2023**

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು